ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು.

2-3)

ಅ) ಶಿವನಿ: 371 ಲಕ್ಷ ರೂ. ಗಳ ವೆಚ್ಚದಲ್ಲಿ 110 ಎಂ.ವಿ.ಎ. ಸಾಮರ್ಥ್ಯದ 110:11 ಕೆ.ವಿ.ಯ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ನಿಗಮವು ತನ್ನ ಆಡಳಿತಾತ್ಮಕ ಮಂಜೂರಾತಿಯನ್ನು ನವೆಂಬರ್-1999ರಲ್ಲಿ ನೀಡಿರುತ್ತದೆ. ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಮತಿಯಿಂದ ಈ ಕಾಮಗಾರಿಗೆ ಸಾಲ ಸೌಲಭ್ಯವು ದೊರಕಿರುತ್ತದೆ. ಅಗತ್ಯವಾದ ಭೂಮಿಯು ನಿಗಮದ ಸ್ವಾಧೀನದಲ್ಲಿರುತ್ತದೆ. ಪ್ರಸ್ತುತ ಈ ಕಾಮಗಾರಿಗಾಗಿ ಟರ್ನ್‌ಕೀ ಆಧಾರದ ಮೇಲೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಇತ್ಯರ್ಥವಾದ ನಂತರ ಕೆಲಸಗಳನ್ನು ಪ್ರಾರಂಭಿಸಿ ಸುಮಾರು 1 ರಿಂದ 1½ ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ (2000-2001) ಈ ಕಾಮಗಾರಿಗಾಗಿ 40 ಲಕ್ಷ ರೂ.ಗಳನ್ನು ಮೀಸಲಿಡಲಾಗಿದೆ.

ಆ) ನೇರಳೇಕೆರೆ: 110:11 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಭೂ ಸ್ವಾಧೀನದ ಬಗ್ಗೆ ಕ್ರಮಗಳನ್ನು ಜರುಗಿಸಲಾಗುತ್ತಿದೆ. ಪ್ರಾರಂಭಿಕ ಕೆಲಸಗಳಿಗಾಗಿ ಈ ವರ್ಷದ ಆಯವ್ಯಯದಲ್ಲಿ (2000-01) ಈ ಕಾಮಗಾರಿಗೆ ರೂ. 5 ಲಕ್ಷಗಳನ್ನು ಒದಗಿಸಲಾಗಿದೆ. ಪ್ರಸ್ತುತ ನಿಗಮವು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ; ಈ ಕಾಮಗಾರಿಯನ್ನು ಕೈಗೊಳ್ಳಲು ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಧನ ಸಹಾಯದ ಅಗತ್ಯವಿದೆ. ಗ್ರಾಮೀಣ ವಿದ್ಯುದೀಕರಣ ನಿಗಮವು ಈ ಯೋಜನೆಯನ್ನು ಮಂಜೂರು ಮಾಡಿದ್ದು, ಸಾಲವನ್ನು ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಲಕ್ಕವಳ್ಳಿ: ಒಂದು 66:11 ಕೆ.ವಿ. ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಇದಕ್ಕೆ ನಿಗಮವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಬೇಕಾಗಿರುತ್ತದೆ. ಅಗತ್ಯವಾದ ಭೂಮಿಯು ನಿಗಮದ ಸ್ವಾಧೀನದಲ್ಲಿರುತ್ತದೆ. ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಈ ಕಾಮಗಾರಿಗೆ ಸಾಲ ಸೌಲಭ್ಯದ ಮಂಜೂರಾತಿಯೂ ಸಹ ದೊರಕಿರುತ್ತದೆ. ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸ್ತುತ ವರ್ಷದ ಆಯವ್ಯಯದಲ್ಲಿ ರೂ. 5 ಲಕ್ಷಗಳನ್ನು ಈ ಕಾಮಗಾರಿಗೆ ಒದಗಿಸಲಾಗಿದೆ.

ತರೀಕೆರೆ ತಾಲ್ಲೂಕಿನಲ್ಲಿ ಶಿವನಿಯ ಉಪಠಾಣೆಯನ್ನು ಮೇಲ್ದರ್ಜೆಗೇರಿಸುವಿಕೆ:

77 (153) ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ತರೀಕೆರೆ ತಾಲ್ಲೂಕು ಶಿವನಿ ಉಪಠಾಣೆಯನ್ನು ಮೇಲ್ದರ್ಜೆಗೇರಿಸಿ ಆರಕ್ಷಕ ಉಪ ನಿರೀಕ್ಷಕರ ಕಛೇರಿಯನ್ನು ಮಾಡುವ ಉದ್ದೇಶವನ್ನು ಸರ್ಕಾರ ಯೋಚಿಸಿದೆಯೇ;

2) ಹಾಗಿದ್ದಲ್ಲಿ, ಈ ಸಾಲಿನ, ಆಯವ್ಯಯದಲ್ಲಿ ಸೇರಿಸಿ ಮಂಜೂರಾತಿ ಎಂದು ನೀಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ಇಲ್ಲ.

2) ಉದ್ಭವಿಸುವುದಿಲ್ಲ.

ಸಾರಾಯಿ ಗುತ್ತಿಗೆದಾರರು ಅನಾಮಧೇಯ ಮಾರಾಟ ಕೇಂದ್ರಗಳನ್ನಾಗಿ ತೆರೆದಿರುವುದು:

79 (208) ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಂಗಳೂರು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಿಂದ ಸಾರಾಯಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಮತ್ತು ಮಾರಾಟ ಕೇಂದ್ರಗಳಾವುವು;

2) ಸದರಿ ಗುತ್ತಿಗೆದಾರರಿಂದ ಆನೇಕಲ್ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಅನಾಮಧೇಯವಾಗಿ ಮಾರಾಟ ಕೇಂದ್ರಗಳನ್ನು ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಹಾಗಿದ್ದಲ್ಲಿ ಅನಾಮಧೇಯ ಮಾರಾಟ ಕೇಂದ್ರಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

1) ಶ್ರೀ ಡಿ. ಪುಟ್ಟಸ್ವಾಮಿ, ನಂ. 200:1 ಆರ್.ವಿ. ರಸ್ತೆ, ಬಸವನಗುಡಿ, ಬೆಂಗಳೂರು-4. ಮಾರಾಟ ಕೇಂದ್ರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

2) ಇಲ್ಲ.

3) ಉದ್ಭವಿಸುವುದಿಲ್ಲ.

ಅನುಬಂಧ

ಬೆಂಗಳೂರು ನಗರ ಜಿಲ್ಲೆಯಲ್ಲಿ 2000-2001ನೇ ಸಾಲಿಗೆ ಸನ್ನದನ್ನು ಮಂಜೂರು ಮಾಡಿದ ಸಾರಾಯಿ ಅಂಗಡಿಗಳ ವಿವರ

(19-2-2001ರ ಅಂತ್ಯಕ್ಕೆ)

ಕ್ರಮ ಸಂಖ್ಯೆ	ವಲಯದ ಹೆಸರು	ಸಾರಾಯಿ ಅಂಗಡಿಯ ಹೆಸರು
1	2	3
1.	ಆನೇಕಲ್	1) ಆನೇಕಲ್ ನಂ. 2
		2) ಆನೇಕಲ್ ನಂ. 3
		3) ಆನೇಕಲ್ ನಂ. 4